ಶ್ರೀ ವಿ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ, ಆಪ್ರದೇಶದ ಜನರು ನನ್ನ ಹತ್ತಿರ ಬಂದಿದ್ದರು. ಜಮೀನು ಸ್ವಾಧೀನ ಪಡಿಸಿಕೊಂಡವರಿಗೆ ಪರಿಹಾರ ಕೊಟ್ಟಿದ್ದೇವೆ. ಅಕ್ರಮವಾಗಿ ಜಮೀನು ಮಾಡುತ್ತಿದ್ದವರೂ ಇದ್ದರು, ಅವರು ಜಮೀನು ಬಿಡಿ ಎಂದರೆ ಬಿಡುತ್ತಿಲ್ಲ.

ಶ್ರೀ ಯು. ಭೂಪತಿ.—ನಾನು ಕೇಳುತ್ತಿರುವುದು ಹಂಗಾಮಿ ಪಟ್ಟ ಇದ್ದಂಥ ಜನರು ಜಮೀನು ಸ್ವಾಧೀನಪಡಿಸಿಕೊಂಡಿದ್ದೀರಿ. ಅಂಥವರಿಗೆ ಸಂಭಾವನೆ ಕೊಡುವ ಉದ್ದೇಶ ಸರ್ಕಾರಕ್ಕೆ ಇದೆಯೇ?

ಶ್ರೀವಿ. ಲಕ್ಷ್ಮೀಸಾಗರ್.—ವರದಿ ತರಿಸುತ್ತೇನೆ.

ಸಿರಸಿ ನಗರದಲ್ಲಿ ನೀರಿನ ತೊಂದರೆ.

ಶ್ರೀ ಗೋಪಾಲ ಮುಕುಂದ ಕಾನಡೆ.—ಸ್ವಾಮಿ, ಸಿರಸಿ ನಗರದಲ್ಲಿ ಎರಡು ಕೊಳವೆ ಬಾವಿ ಇದ್ದು ಒಂದರಲ್ಲಿ ನೀರಿಲ್ಲ, ಇನ್ನೊಂದರಲ್ಲಿ ಸ್ವಲ್ಪ ಮಾತ್ರ ಜನ ಬರುತ್ತದೆ. ಸಾರ್ವಜನಿಕರು ಮುನಿಸಿಪಾಲಿಟಿಯ ಮೇಲೆ ನನ್ನ ಮೇಲೆ ಕೂಡ ಗಲಾಟೆ ಮಾಡಿದ್ದಾರೆ ಮಾನ್ಯ ಮಂತ್ರಿಯವರು ಸಿರಸಿ ನಗರದಲ್ಲಿರುವ ನೀರಿನ ತೊಂದರೆಯನ್ನು ತಪ್ಪಿಸುವುದಕ್ಕಾಗಿ ೧೫ ಕೊಳವೆ ಬಾವಿಗಳನ್ನು ಹಾಕಿಸತಕ್ಕ ಭರವಸೆ ಕೊಡಬೇಕು. ಅಲ್ಲಿ ಸುಮಾರು ೨೫ ೦೦೧ ಜನಸಂಖ್ಯೆ ಇದೆ.

ಶ್ರೀ ವಿ. ಲಕ್ಷ್ಮೀಸಾಗರ್.—ಸ್ವಾಮಿ, ಹಾಲಿ ಇರತಕ್ಕ ಕೊಳವೆ ಬಾವಿಗಳಿಂದ ಎಷ್ಟು ನೀರು ಸಿಗುತ್ತದೆ. ಆಗತ್ಯವಾಗಿ ಬೇಕಾಗಿರತಕ್ಕ ನೀರಿನ ಪ್ರಮಾಣ ಎಷ್ಟು ? ಎಲ್ಲವನ್ನು ವಿಚಾರಿಸಿ, ನೀರು ಕೊಡುವುದಕ್ಕೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಗೋಪಾಲ ಮುಕುಂದ ಕಾನಡೆ.—ಸ್ವಾಮಿ. ಜೀವನಕ್ಕೆ ಬೇಕಾದ ನೀರು ಇಲ್ಲದೇ ಹೋದರೆ ಜೀವನ ? ಎಲ್ಲಾ ಕಾಗದಪತ್ರಗಳನ್ನು ನಾನೇ ತಂದಿದ್ದೇನೆ.

ಶ್ರೀ ವಿ. ಲಕ್ಷ್ಮೀಸಾಗರ್.—ಕುಡಿಯುವ ನೀರಿನ ವ್ಯವಸ್ಥೆ ಸರಿಯಿಲ್ಲವೆಂದು ಹೇಳಿದ್ದಾರೆ. ಇದರ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳನ್ನು ಕರೆಯಿಸಿ ವಿಷಯ ತಿಳಿಯುತ್ತೇನೆ ಮತ್ತು ನೀರು ಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಗೋಪಾಲ ಮುಕುಂದ ಕಾನಡೆ.—೬೦ ಲಕ್ಷ ರೂಪಾಯಿಗಳನ್ನು ಇದಕ್ಕೆ ಮಂಜೂರು ಮಾಡಿದ್ದಾರೆ. ಕೆಲಸ ಮಾತ್ರ ಆಗಿಲ್ಲ

ಶ್ರೀ ವಿ. ಲಕ್ಷ್ಮೀಸಾಗರ್.—ಸ್ವಾಮಿ, ಆವರಿಗೆ ಪರಿಹಾರ ಬೇಕೋ ಬೇಡವೋ ?

ಕಾರವಾರ ಪೋಲೀಸ್ ಠಾಣೆಯಲ್ಲಿ ಕುಖ್ಯಾತ ಗೂಂಡಾ ನನ್ನು ಸಾಕಿರುವುದು

ಶ್ರೀ ಪ್ರಭಾಕರ ರಾಣೆ.—ಸನ್ಮಾನ್ಯ ಅಧ್ಯಕ್ಷರೇ, ಕಾರವಾರ ಪೋಲೀಸ್ ಇಲಾಖೆಯಲ್ಲಿ ಕುಖ್ಯಾತ ಗೂಂಡ ಒಬ್ಬರನ್ನು ಸಾಕಿದ್ದಾರೆ. ಇವನು ನಡೆಸುತ್ತಿರುವ ಭಯೋತ್ಪಾದಕ ಕೆಲಸಗಳ ಸ್ಯಾಂಪಲ್ ಮಾತ್ರ ನಾನು ಹೇಳುತ್ತಿದ್ದೇನೆ. ಇದರ ದರ್ಶನ ಮಾಡಿದ ಮಕ್ಕಳು ರಾತ್ರಿಯಲ್ಲಿ ತನಸಿನಲ್ಲಿ ಕನವರಿಸುತ್ತಿದೆ. ಇವನನ್ನು ನೋಡಿದ ಹೆಂಗಸರ ಎದೆ ಡವಡವ ಎಂದು ಒಡೆದುಕೊಳ್ಳುತ್ತದೆ. ಕಾರವಾರ ನಗರದ ಮತ್ತು ಗೋವಾ ಗಡಿಯ ಮಧ್ಯದಲ್ಲಿರತಕ್ಕ ಸದಾಶಿವಗಡ, ಮಖಾಲಿ ಹಾಗೂ ಆಸ್ಪೋಟಿ ಇವನ ಕಾರ್ಯಕ್ಷೇತ್ರವಾಗಿರುತ್ತದೆ. ಇವನು ಮಾಡಿದಂಥ ದುಷ್ಕೃತ್ಯಗಳ ಬಗ್ಗೆ ಇದುವರೆವಿಗೂ ಸರ್ಕಾರ ಕ್ರಮ ತೆಗೆದುಕೊಂಡಿಲ್ಲ. ಇದರಿಂದ ಜನರಿಗೆ ಬಹಳ ತೊಂದರೆಯಾಗುತ್ತಿದೆ. ಈತ ಸದಾಶಿವಗಡ ಆರಕ್ಷಕ ಠಾಣೆಯ ಸೋಲೀಸ್ ಸಬ್ ಇನ್ಸ್‌ಪೆಕ್ಟರ್ ಆಗಿರುವುದರಿಂದ ಸರ್ಕಾರದವರು ನೇರವಾಗಿ ಕ್ರಮ ತೆಗೆದುಕೊಳ್ಳುವುದಕ್ಕೆ ಅಸಮರ್ಥರಾಗಿದ್ದಾರೆ. ಈತ ರಸ್ತೆ ಮೇಲೆ ಹೋಗುತ್ತಿದ್ದಾಗ ಪ್ರಾಥಮಿಕ ಶಾಲಾ ಶಿಕ್ಷಕಿ ಈತನನ್ನು ನೋಡಿ ಮುಗಳು ನಗೆ ಬೀರಲಿಲ್ಲ ಎಂದು ಪೋಲೀಸ್ ಠಾಣೆಗೆ ಕರೆಯಿಸಿ ಅವಾಚ್ಯ ಶಬ್ದಗಳಿಂದ ಬೈದಿದ್ದಾನೆ. ಇವನ ಸಂಬಂಧಿಕರಿಗೆ ಕಡಿಮೆ ದರದಲ್ಲಿ ಮನೆ ಬಾಡಿಗೆ ಕೊಡುವ ಮನೆ ಮಾಲೀಕರ ಮೇಲೆ ಕೇಸುಗಳನ್ನು ಹಾಕುತ್ತಾನೆ.

ಶ್ರೀ ವಿ. ಲಕ್ಷ್ಮೀಸಾಗರ್.—ವಿಷಯವನ್ನು ಸಂಕ್ಷಿಪ್ತವಾಗಿ ಹೇಳಿ, ಪುರಾಣ ಹೇಳಿಕೊಂಡು ಹೋದರೆ ಹೇಗೆ ?